ಶಿಗ್ಗಾಂವ-ಸವಣೂರು ತಾಲ್ಲೂಕ್‌ಗಳಲ್ಲಿ ವಿದ್ಯುತ್ ಸರಬರಾಜು ತೊಂದರೆಯಾಗುತ್ತಿರುವುದು.

3434 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಂಗ್ಗಾವ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿ 33 ಕೆ.ವಿ.ನೇ ಲೈನು ಇರುವ ಕಾರಣ ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ವಿದ್ಯುತ್ ಸರಬರಾಜು ಮಾಡುವಲ್ಲಿ ತೊಂದರೆಯಾದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ 110 ಕೆ.ವಿ.ನೇ ಲೈನು ಪ್ರಾರಂಭ ಎಷ್ಟು ದಿವಸಗಳಲ್ಲಿ ಮಾಡಲಾಗುವುದು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಶಿಗ್ಗಾಂವ್-ಸವಣೂರು ತಾಲ್ಲೂಕುಗಳಲ್ಲಿರುವ ವಿದ್ಯುತ್ತಿನ ಕಡಿಮೆ ವೋಲ್ಟೇಜಿನ ಪರಿಸ್ಥಿತಿ ಗಮನಕ್ಕೆ ಬಂದಿದೆ.

ಆ) ಪ್ರಸ್ತುತ 110 ಕೆ.ವಿ. ಲೈನಿನ ನಿರ್ಮಾಣ ಕಾರ್ಯದ ಪ್ರಸ್ತಾವನೆ ಮಂಡಳಿಯಲ್ಲಿರುವುದಿಲ್ಲ. ಆದರೆ ಸದರಿ ತಾಲ್ಲೂಕುಗಳಲ್ಲಿನ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ಸುಧಾರಿಸಲು ಮಂಡಳಿಯು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಹಾವೇರಿಯಿಂದ ಸವಣೂರಿಗೆ 33 ಕೆ.ವಿ. ವಿದ್ಯುತ್ ಲೈನನ್ನು ಹಾತೀಮತ್ತೂರಿನ ಮೂಲಕ ನಿರ್ಮಾಣ ಮಾಡಿ ಹಾತೀಮತ್ತೂರಿನಲ್ಲಿ ಒಂದು 33 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡುವುದು. ಉದ್ದೇಶಿತ ಉಪ-ವಿದ್ಯುತ್ ಕೇಂದ್ರದಲ್ಲಿ ತಲಾ 5 ಎಂ.ವಿ.ಎ. ಸಾಮರ್ಥ್ಯದ ಎರಡು ಪರಿವರ್ತಕಗಳನ್ನು ಸ್ಥಾಪಿಸಲಾಗುವುದು.

2) ಸವಣೂರಿನಲ್ಲಿ ಹಾಲಿಯಿರುವ 33 ಕೆ.ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಇನ್ನೂ ಒಂದು 5 ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸುವುದು.

ಸಹಕಾರಿ ರಂಗದಲ್ಲಿಯ ಕಾರ್ಖಾನೆಗಳ ವ್ಯವಹಾರ.

3442 - ಶ್ರೀ ಬಾಬಾ ಗೌಡ ಪಾಟೀಲ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಸಹಕಾರಿ ರಂಗದಲ್ಲಿಯ ಕಾರ್ಖಾನೆಗಳ ಕಾರ್ಯನಿರ್ವಾಹಕ ನಿರ್ದೇಶಕರು ಚೆಕ್ಕಿನ ಮೇಲೆ ಸಹಿ ಹಾಕಿ ಖರ್ಚು ಮಾಡುತ್ತಿರುವುದರಿಂದ ಅಧ್ಯಕ್ಷರಿಗೆ ಖರ್ಚಿನ ವ್ಯವಹಾರಗಳು ತಿಳಿಯದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

ಆ) *ಹಾಗಿದ್ದಲ್ಲಿ ಮೊದಲಿನಂತೆಯೇ ಚೆಕ್ಕಿನ ಮೇಲೆ ಚೇರ್‌ಮನ್ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕ ಇಬ್ಬರ ಸಹಿ ಹಾಕುವ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಆಲೋಚಿಸುತ್ತಿದೆಯೇ?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಮಂತ್ರಿಯವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.